ಅಸಲು ದಾವಾ ನಂ.114/2015

ಡಿ ಡಬ್ಲ್ಯೂ1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 25-06-2019.

ಪಾಟೀ ಸವಾಲು ಃ- ಶ್ರಿ ಜಿ ಆರ್ ಜಿ ವಾದಿಯರ ಪರ ವಕೀಲರಿಂದ :

ನನ್ನ ಗಂಡನ ಹೆಸರು ಶಿವರಾಮು ಆಗಿರುತ್ತದೆ . ನನ್ನ ಮಾವನ ಹೆಸರು ಚಿಕ್ಕಚಾರ್ . ಸದರಿ ಚಿಕ್ಕಚಾರಿ ರವರಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೇ ಹೆಂಡತಿಗೆ ಇಬ್ಬರು ಮಕ್ಕಳು ಇದ್ದು ಅವರ ಹೆಸರು ರಾಜಗೋಪಾಲಚಾರ್ ಮತ್ತು ರಾಮಕೃಷ್ಣಚಾರ್ ಆಗಿರುತ್ತದೆ . ಎರಡನೇ ಹೆಂಡತಿ ಮಗ ನನ್ನ ಗಂಡ ಶಿವರಾಮು ಆಗಿರುತ್ತಾರೆ. ನನ್ನ ಮಾವ ತೀರಿಕೊಂಡ ದಿನಾಂಕ ನನಗೆ ನೆನಪಿರುವುದಿಲ್ಲ. ನನ್ನ ಮಾವ ನನ್ನ ಗಂಡನ ಬಾಲ್ಯದಲ್ಲಿಯೇ ಮೃತಪಟ್ಟಿರುತ್ತಾರೆ . ನನ್ನ ಮಾವನ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಗಳು ಅವರ ಮರಣದ ನಂತರ ನನ್ನ 2 ನೇ ಅತ್ತೆಯಾದ ಕಾಳಮ್ಮನ ಹೆಸರಿ ಪೌತಿ ಖಾತೆಯಾಗಿರುತ್ತದೆ . ನನ್ನ ಮಾವನಿಗೆ 1 ನೇ ಹೆಂಡತಿ ತೀರಿಕೊಂಡ ನಂತರ ಕಾಳಮ್ಮನವರನ್ನು 2 ನೇ ಮದುವೆಯಾಗಿರುತ್ತಾರೆ . ದಿನಾಂಕ 21-6-1979 ರಂದು ಮದುವೆಯಾಗಿದ್ದು ನನ್ನ ಮದುಗಿಂತ ಮುಂಚೆಯೇ ನನ್ನ ಮಾವನವರ ಆಸ್ತಿಗಳನ್ನು ರಾಜಗೋಪಾಲಚಾರಿ , ರಾಮಕೃಷ್ಣ ಚಾರಿ ಹಾಗೂ ನನ್ನ ಗಂಡ ಶಿವರಾಮು ರವರ ನಡುವೆ ವಿಭಾಗಮಾಡಿಕೊಂಡಿದ್ದರು . ಸರ್ವೆ ನಂ.152◌ಃ1 ರಲ್ಲಿ 32 ಗುಂಟೆ ಜಮೀನು , ಸರ್ವೆ ನಂ.153 ರಲ್ಲಿ 21 ಗುಂಟೆ , ಸರ್ವೆ ನಂ.154 ರಲ್ಲಿ 18 ಗುಂಟೆ , ಸರ್ವೆ ನಂ.157◌ಃ5 ರಲ್ಲಿ 7 ಗುಂಟೆ ಜಮೀನು ನನ್ನ ಗಂಡನವರ ಭಾಗಕ್ಕೆ ಬಂದಿರುತ್ತದೆ . ಸರ್ವೆ ನಂ.157◌ಃ5 ರಲ್ಲಿ ಒಟ್ಟು 15 ಗುಂಟೆ ಜಮೀನು ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.153 ರಲ್ಲಿ ಯಾರ ಯಾರ ಭಾಗಕ್ಕೆ ಎಷ್ಟೆ ಎಷ್ಟು ಜಮೀನು ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ಸರ್ವೆ ನಂ.153 ರಲ್ಲಿ ರಾಜಗೋಪಾಲಚಾರಿಗೆ ಹನ್ನೆರಡುಕಾಲು ಗುಂಟೆ , ರಾಮಕೃಷ್ಣಚಾರಿಗೆ ಹನ್ನೆರಡುಕಾಲು ಗುಂಟೆ ಅದೇ ರೀತಿ ನನ್ನ ಗಂಡನಿಗೆ ಹನ್ನೆರಡುವರೆ ಗುಂಟೆ ಖಾತೆಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ ಅದರೆ ನನ್ನ ಗಂಡನ ಪಾಲಿಗೆ ಸದರಿ ಸರ್ವೆ ನಂಬರ್ ನಲ್ಲಿ 21 ಗುಂಟೆ ಜಮೀನು ಬಂದಿರುತ್ತದೆ . ಸರ್ವೆ ನಂ.153 ರಲ್ಲಿ ಒಟ್ಟು ಎಷ್ಟು ಜಮೀನು ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 37 ಗುಂಟೆ ಜಮೀನು ಇರುತ್ತದೆಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಕಾಣೆಯಾದ ಸುಮಾರು 8-9 ವರ್ಷಗಳ ನಂತರ ನನ್ನ ಹೆಸರಿಗೆ ಖಾತೆ ಬದಲಾವಣೆಮಾಡಿಕೊಂಡಿರುತ್ತೇನೆ . ನಾನು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಮೂಲಕ ನನ್ನ ಗಂಡನ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ . ನಾನು ಈ ಸಂಬಂದ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ಯಾವುದೇ

ತೊಂದರೆ ಇಲ್ಲ. ದಿನಾಂಕ 12-4-1993 ರಂದು ನನ್ನ ಭಾವ ರಾಜಗೋಪಾಲಚಾರಿ ಅವರ ಮೈನರ್ ಮಕ್ಕಳು ಹಾಗೂ 2 ನೇ ಪ್ರತಿವಾದಿ ಅವರ ಮೈನರ್ ಮಕ್ಕಳುಗಳು ಸೇರಿ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಶುದ್ಧ ಕ್ರಯಕ್ಕೆ ವಾದಿಗೆ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ ದಾವಾ ಸ್ವತ್ತು ಐಟಂ ನಂ.1 ಮತ್ತು 2 ರಲ್ಲಿ ಹಕ್ಕು ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿ . ನನ್ನ ಗಂಡ ಇಂದಿಗೂ ಬದುಕಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಾನು ನನ್ನ ಗಂಡ ಕಾಣೆಯಾದ ನಂತರ ನನ್ನ ಗಂಡನ ಪಾಲಿಗೆ ಬಂದ ಆಸ್ತಿಗಳನ್ನು ಹೊರತುಪಡಿಸಿ ಹೆಚ್ಚಿನ ಆಸ್ತಿಗಳನ್ನು ಮೋಸದಿಂದ ದಾಖಲೆಗಳನ್ನು ಸೃಷ್ಟಿಸಿ ಖಾತೆಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ6 ರಂತೆ ಸರ್ವೆ ನಂ.157ಃ5 ರಲ್ಲಿ ನನ್ನ ಗಂಡನಿಗೆ 5 ಗುಂಟೆ ರಾಜಗೋಪಾಲಚಾರಿರವರಿಗೆ 5 ಗುಂಟೆ ಮತ್ತು ರಾಮಕೃಷ್ಣಚಾರಿರವರಿಗೆ ವಿಭಾಗದಂತೆ ಅವರ ಹೆಸರಿಗೆ ಖಾತೆಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಐಟಂ ನಂ. ಸರ್ವೆ ನಂ.153 ರಲ್ಲಿ ನಿಪಿ5 ರಂತೆ ರಾಜಗೋಪಲಾಚಾರಿಗೆ ಹನ್ನೆರಡುಕಾಲು ಗುಂಟೆ ರಾಮಕೃಷ್ಣಚಾರಿಗೆ ಹನ್ನೆರಡುಕಾಲು ಗುಂಟೆ ನನ್ನ ಗಂಡನನಿಗೆ ಹನ್ನೆರಡುವರೆ ಗುಂಟೆ ಜಮೀನು ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಬದಲಾವಣೆಮಾಡಿಕೊಳ್ಳುವ ಸಮಯೇದಲ್ಲಿ ಸದರಿ ಆಸ್ತಿಗಳುಯಾವ ಮೂಲದಿಂದ ಬಂದಿರುತ್ತದೆಂದು ಸಂಬಂಧಪಟ್ಟ ತಾಲ್ಲೋಕು ಕಛೇರಿ ಚನ್ನರಾಯಪಟ್ಟಣ ದಿಂದ ನಾನು ಪಡೆದುಕೊಂಡಿರುತ್ತೇನೆ . ಸದರಿ ದಾಖಲೆಗಳನ್ನು ನಾನು ಪರಿಶೀಲಿಸಿ ಅದರಂತೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ . ಸರ್ವೆ ನಂ.153 ರಲ್ಲಿ 21 ಗುಂಟೆ ನನ್ನ ಗಂಡನ ಹೆಸರಿಗೆ ಖಾತೆಯ ನನ್ನ ಮದುಗೂ ಮುಂಚೆಯೇ ಖಾತೆಯಾಗಿರುತ್ತದೆ . ಅದೇ ರೀತಿ ಸರ್ವೆ ನಂ.157ಃ5 ರಲ್ಲಿ 7 ಗುಂಟೆ ಜಮೀನು ನನ್ನ ಗಂಡನ ಪಾಲಿಗೆ ವಿಭಾಗದ ಮೂಲಕ ಬಂದಿರುತ್ತದೆ . ಈ ಮೇಲೆ ಹೇಳಿದ ಜಮೀನುಗಳು ನನ್ನಗಂಡನ ಭಾಗಕ್ಕೆ ನನ್ನ ಮದುವೆಗೂ ಮುಂಚೆಯೇ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಮೋಸಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿಕೊಂಡುಖಾತೆ ವರ್ಗಾವಣೆಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಹಾಗೂ 2 ಮತ್ತು 3 ನೇಪ್ರತಿವಾದಿಗಳಾದ ನಾವುಗಳು ವಾದಿಗೆ ಮೋಸಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಖಾತೆ ಬದಲಾವಣೆಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ನಾನು ಯಾಶೋಧಮ್ಮ , ರಂಗಸ್ವಾಮಿ ಸೇರಿಕೊಂಡು ವಾದಿಗೆ ತಂಟೆ ತಕರಾರು ಮಾಡಿರುತ್ತೇವೆಂದರೆ ಸರಿಯಲ್ಲ. ವಾದಿಗೆ ವಯಸ್ಸಾಗಿರುದನ್ನು ಕಾರಣವಾಗಿಟ್ಟುಕೊಂಡು ನಾವುಗಳು ಅವರಿಗೆ ತೊಂದರೆ ನೀಡುತ್ತಿದ್ದೇವೆಂದರೆ ಸರಿಯಲ್ಲ. ನನಗೆ ಯಾವುದೇ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ .

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,